ಗುಲಬರ್ಗಾ ವಿಶ್ವವಿದ್ಯಾಲಯ,

ಕಲಬುರಗಿ

ಪರೀಕ್ಷಾ ವಿಭಾಗ, ಜ್ಞಾನ ಗಂಗಾ, ದೂರವಾಣಿ ಸಂಖ್ಯೆ: 08472-26203

ಸಂಖ್ಯೆ: ಗುವಿಕ: ಪರೀಕ್ಷಾ;ಸಿ1(14)/2017-18/ 1971 ದಿನಾಂಕ:20.07.2017

## ಅಧಿಸೂಚನೆ

ವಿಷಯ: ಅಕ್ಟೋಬರ್/ನವೆಂಬರ್,2017ರಲ್ಲಿ ನಡೆಯುವ ಬಿ.ಎ./ಬಿ.ಎಸ್ಸಿ/ಬಿ.ಕಾಂ/ಬಿಬಿಎಂ/ಬಿಸಿಎ/ಮತ್ತು ಬಿ.ಎಸ್.ಡಬ್ಲ್ಯೂ ಪ್ರಥಮ, ಮೂರನೇ ಮತ್ತು ಐದನೇ ಸೆಮಿಸ್ಟರ್ ವರ್ಷದ ಪರೀಕ್ಷೆಗಳ ಬಗ್ಗೆ.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ:

ಅಕ್ಟೋಬರ್/ನವೆಂಬರ್,-2017ರಲ್ಲಿ ನಡೆಯುವ ಬಿ.ಎ/ಬಿ.ಎಸ್ಸಿ/ಬಿ.ಕಾಂ/ಬಿಬಿಎಂ/ಬಿಸಿಎ/ಬಿವಿಎ/ಹಾಗೂ ಬಿ.ಎಸ್.ಡಬ್ಲ್ಯೂ ಪ್ರಥಮ, ಮೂರನೇ ಮತ್ತು ಐದನೇ ಸೆಮಿಸ್ಟರ್ ಪರೀಕ್ಷೆಯ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ ಮುಂತಾದ ವಿವರಗಳನ್ನು ತೋರಿಸುವ ಪಟ್ಟಿ.

| ಕ್ರ ಸಂ. | ಪರೀಕ್ಷೆಗಳು | ಪರೀಕ್ಷಾ ಶುಲ್ಕ ರೂ. ಅಂಕಪಟ್ಟಿ ಶುಲ್ಕ ಹಾಗು ಅರ್ಜಿ ತಪಾಸಣೆ ಶುಲ್ಕ ರೂ. | ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದೊಡನೆ ಕಾಲೇಜಿನಲ್ಲಿ ಪರೀಕ್ಷಾ ಅರ್ಜಿ ಸಲ್ಲಿಸಬೇಕಾದ ಅಂತಿಮ ದಿನಾಂಕ | | | ಪ್ರಾಂಶುಪಾಲರು ಪರೀಕ್ಷಾ ಶುಲ್ಕದೊಡನೆ ಅಭ್ಯರ್ಥಿಯ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಅಂತಿಮ ದಿನಾಂಕ | | |
|---|---|---|---|---|---|---|---|---|---|---|
| | | | ಲಿಖಿತ ಪರೀಕ್ಷೆ ದಿನಾಂಕ | ಪ್ರಾಯೋಗಿಕ ಪರೀಕ್ಷೆ ದಿನಾಂಕ | ದಂಡ ಶುಲ್ಕ ವಿಲ್ಲದೆ | ರೂ.100/ ದಂಡ ಶುಲ್ಕ ಸಹಿತ | ರೂ.750 ದಂಡ ಶುಲ್ಕ ಸಹಿತ | ದಂಡ ಶುಲ್ಕ ವಿಲ್ಲದೆ | ರೂ.100/ ದಂಡ ಶುಲ್ಕ ಸಹಿತ | ರೂ.750/- ದಂಡ ಶುಲ್ಕ ಸಹಿತ |
| 01 | ಬಿ.ಎ/ಬಿ.ಕಾಂ/ಬಿ.ಎಸ.ಡಬ್ಲ್ಯೂ ಪ್ರಥಮ ಸೆಮಿಸ್ಟರ್ | ರೂ. 900/- 70+12 | 28.10.2017 | 15.10.2017 to 27.10.2017 | 20.09.2017 | 25.09.2017 | 28.09.2017 | 25.09.2017 | 28.09.2017 | 03.10.2017 |
| 02 | ಬಿ.ಎ/ಬಿ.ಕಾಂ/ಬಿ.ಎಸ.ಡಬ್ಲ್ಯೂ ಮೂರನೇ ಸೆಮಿಸ್ಟರ್ | ರೂ. 900/- 70+12 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 03 | ಬಿ.ಎ/ಬಿ.ಕಾಂ/ಬಿ.ಎಸಡಬ್ಲ್ಯೂ ಐದನೇ ಸೆಮಿಸ್ಟರ್ | ರೂ. 900/- 70+12 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 04 | ಬಿ.ಎಸ್ಸಿ ಪ್ರಥಮ ಸೆಮಿಸ್ಟರ್ | ರೂ. 1000/- 70+12 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 05 | ಬಿ.ಎಸ್ಸಿ ಮೂರನೇ ಸೆಮಿಸ್ಟರ್ | ರೂ. 1000/- 70+12 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 06 | ಬಿ.ಎಸ್ಸಿ ಐದನೇ ಸೆಮಿಸ್ಟರ್ | ರೂ. 1000/- 70+12 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 07 | ಬಿ.ಸಿ.ಎ/ಬಿಬಿಎಂ ಪ್ರಥಮ ಸೆಮಿಸ್ಟರ್ | ರೂ. 1000/- 70+12 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 08 | ಬಿ.ಸಿ.ಎ/ಬಿಬಿಎಂ ಮೂರನೆ ಸೆಮಿಸ್ಟರ್ | ರೂ. 1000/- 70+12 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 09 | ಬಿ.ಸಿ.ಎ/ಬಿಬಿಎಂ ಐದನೇ ಸೆಮಿಸ್ಟರ್ | ರೂ. 1000/- 70+12 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |

Scheduled

**ಟಿಪ್ಪಣಿ: ಆನ್ಲೈನ್ (Online) ಮುಖಾಂತರ ಭರಿಸಿದ ಶುಲ್ಕದ ರಸೀದಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು ಪರೀಕ್ಷಾ ವಿಭಾಗಕ್ಕೆ ನಿಗದಿತ ಸಮಯದಲ್ಲಿ ಸಲ್ಲಿಸತಕ್ಕದು. ತಪ್ಪಿದಲ್ಲಿ ಪ್ರತಿ ದಿವಸ ರೂ.500/- ದಂಡ ವಿಧಿಸಲಾಗುವುದು.**

01. ಬಿ.ಎ/ಬಿ.ಎಸ್ಸಿ/ಬಿ.ಕಾಂ/ಬಿಬಿಎಂ. ಭಾಗಶಃ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಪ್ರತಿ ಪತ್ರಿಕೆಗೆ ಶುಲ್ಕ ರೂ. 175/- ಎರಡು ಪತ್ರಿಕೆಗಳಿಗೆ ರೂ.350/- ಹಾಗೂ ಎರಡಕ್ಕಿಂತ ಹೆಚ್ಚಿನ ಪತ್ರಿಕೆಗಳಿಗೆ ಪೂರ್ಣ ಶುಲ್ಕ ಪಾವತಿಸಬೇಕು.

**ಬಿ.ಬಿ.ಎಂ/ಬಿ.ಸಿ.ಎ. ಅಭ್ಯರ್ಥಿಗಳು ಪೂರ್ಣ ಶುಲ್ಕ ಭರಿಸಬೇಕು**

ಪರೀಕ್ಷೆಗಳ ಗಣಕಿಕೃತ/ಮ್ಯಾನುವಲ್ ಅರ್ಜಿಗಳನ್ನು ಪ್ರಾಂಶುಪಾಲರು ವಿಶ್ವವಿದ್ಯಾಲಯದಿಂದ ಪಡೆಯಬಹುದು. ಈ ಬಗೆಯಲ್ಲಿ ಪಡೆಯಲಾದ ಗಣಕಿಕೃತ/ಮ್ಯಾನುವಲ್ ಅರ್ಜಿಗಳಿಗೆ **ರೂ.70/-** ದರದಂತೆ ಪೂರ್ಣ ಪಾವತಿ ಮಾಡಿ ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರಿಂದ ಪಡೆಯಬಹುದು. ಈ ಹಣವನ್ನು ವಿತ್ತಾಧಿಕಾರಿಗಳು ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರ ಹೆಸರಿಗೆ **ಆನ್ಲೈನ್ (Online)** ಮುಖಾಂತರ ಪಾವತಿಸಬಹುದು.

ಪ್ರಾಂಶುಪಾಲರು ಎಲ್ಲ ಅರ್ಜಿಗಳನ್ನು ಸಂಪೂರ್ಣ ಪರಿಶೀಲನೆಯ ನಂತರ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕಗಳ **ಆನ್‌ಲೈನ್ (Online)** ದ್ವಿಪ್ರತಿ ಪಟ್ಟಿಯೊಂದಿಗೆ ನಿಗದಿತ ದಿನಾಂಕದೊಳಗಾಗಿ ಕುಲಸಚಿವರು (ಮೌಲ್ಯಮಾಪನ) ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ ಇವರಿಗೆ ಸಲ್ಲಿಸಬೇಕು.

ಬಿ.ಎ/ಬಿ.ಎಸ್ಸಿ/.ಬಿ.ಕಾಂ/ಬಿಬಿಎಂ/ಬಿ.ಸಿಎ. ಮತ್ತು ಬಿ.ಎಸ್.ಡಬ್ಲ್ಯೂ ಸೆಮಿಸ್ಟರ್ ಪರೀಕ್ಷೆಗಳಿಗೆ ಕೋರ್ಸವಾರ ಡಿಡಿಗಳನ್ನು ಹಾಗೂ ಪಟ್ಟಿಗಳನ್ನು ಪ್ರತ್ಯೇಕವಾಗಿ ಲಗತ್ತಿಸಬೇಕು. ಪರೀಕ್ಷೆಗೆ ಹಾಜರಾಗುವ ವಿಷಯವಾರು ಅಭ್ಯರ್ಥಿಗಳ ಸಂಖ್ಯೆ ತೋರಿಸುವ ಪಟ್ಟಿಯನ್ನು ಲಗತ್ತಿಸಬೇಕು.

ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಪ್ರಾಂಶುಪಾಲರು ಈ ಕೆಲಗಿನ ಮಾಹಿತಿಗಳನ್ನು ವಿಶೇಷವಾಗಿ ಗಮನಿಸಲು ಸೂಚಿಸಲಾಗಿದೆ.

1. ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶವಿರುವದಿಲ್ಲ.
2. ಅಂಕಪಟ್ಟಿಗಳ ಪ್ರತಿಗಳನ್ನು ಆಯಾ ಮಹಾವಿದ್ಯಾಲಯದ ಪ್ರಾಂಶುಪಾಲರೇ ದೃಢೀಕರಿಸಬೇಕು.
3. ವಿನಾಯತಿ (Exemptions) ಪಡೆದ ಬಗ್ಗೆ ಹಾಗೂ ಹಿಂದಿನ ಪರೀಕ್ಷೆಯ ಪಾಸಾದ ಬಗ್ಗೆ ದೃಡೀಕರಿಸಲ್ಪಟ್ಟ ಝುರಾಕ್ಸ ಪ್ರತಿಗಳನ್ನು ಲಗತ್ತಿಸಬೇಕು.
4. ವಿಶ್ವವಿದ್ಯಾಲಯಕ್ಕೆ ಅರ್ಜಿಗಳನ್ನು ಕಳುಹಿಸುವ ಮೊದಲು ಅವುಗಳನ್ನು ಚೆನ್ನಾಗಿ ಪರಿಶೀಲಿಸಬೇಕು.
5. ಪರೀಕ್ಷಾ ಅರ್ಜಿಗಳ ಕ್ರಮ ಸಂಖ್ಯೆಗಳು ಅನುಕ್ರಮವಾಗಿರುವಂತೆ ನೋಡಿಕೊಳ್ಳಬೇಕು.
6. ಪರೀಕ್ಷಾ ಅರ್ಜಿಗಳ ಜೊತೆ ಆಕರಣೆ ಮಾಡಿದ ಪರೀಕ್ಷಾ ಶುಲ್ಕದ ವಿವರವನ್ನು ತೋರಿಸುವ ಪಟ್ಟಿಯನ್ನು ತ್ರಿಪ್ರತಿಯಲ್ಲಿ ಲಗತ್ತಿಸಬೇಕು.
7. ಪ್ರವೇಶ ಪತ್ರದ ಮೇಲೆ ಅಂಟಿಸಲ್ಪಟ್ಟಿರುವ ಅಭ್ಯರ್ಥಿಗಳ ಭಾವಚಿತ್ರದ ಮೇಲೆ ಪ್ರಾಂಶುಪಾಲರ ಸಹಿ ಇರತಕ್ಕದ್ದು.
8. ಪರಿಶಿಷ್ಟ ಜಾತಿಃ ಪರಿಶಿಷ್ಟ ಪಂಗಡ ಹಾಗೂ ಕೆಟಹರಿ-1, ಕೆಟಗರಿ-2(ಎ), ಕೆಟಗರಿ-2(ಬಿ), ಕೆಟಗರಿ-3(ಎ), ಕೆಟಗರಿ-3(ಬಿ), ಸಾಮಾನ್ಯ ಅಭ್ಯರ್ಥಿಗಳ ಹೆಸರುಗಳನ್ನು ಹಾಗೂ ಅವರಿಂದ ಪಡೆದ ಶುಲ್ಕದ ವಿವರಗಳನ್ನು ತೋರಿಸುವ ಪ್ರತ್ಯೇಕ ಪಟ್ಟಿ ( ದ್ವಿಪ್ರತಿ) ಯನ್ನು ಕುಲಸಚಿವರು (ಮೌಲ್ಯಮಾಪನ), ಇವರಿಗೆ ಹಾಗೂ ಸದರಿ ಪಟ್ಟಿಯ ಮತ್ತೊಂದು ಪ್ರತಿಯನ್ನು ವಿತ್ತಾಧಿಕಾರಿಗಳು ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರಿಗೆ ಕಳುಹಿಸಿಕೊಡಬೇಕು.

ಎಸ್.ಸಿ/ಎಸ್.ಟಿ/ಕೆಟಗರಿ-1, ಕೆಟಗರಿ-2(ಎ), ಕೆಟಗರಿ-2(ಬಿ), ಕೆಟಗರಿ-3(ಎ) ಮತ್ತು ಕೆಟಗರಿ-3(ಬಿ) ಗಂಪಿಗೆ ಸೇರಿದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿ
ಮಾಡಲು ವಿನಾಯಿತಿ ಇರುತ್ತದೆ. ಆದರೆ ಪರೀಕ್ಷಾ ಅರ್ಜಿ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಸ್ಕೂಟನಿ ಶುಲ್ಕ ಪಾವತಿ ಮಾಡಬೇಕಾಗುತ್ತದೆ. ಸದರಿ ವಿದ್ಯಾರ್ಥಿಗಳ ಪರೀಕ್ಷಾ
ಶುಲ್ಕವನ್ನು ಆಯಾ ಸರ್ಕಾರಿ ಇಲಾಖೆಯಿಂದ ಪಡೆದು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡುವ ಜವಾಬ್ದಾರಿ ಆಯಾ ಪ್ರಾಂಶುಪಾಲರ ಹೊಣೆಯಾಗಿರುವದು. ಒಂದು ವೇಳೆ
ಸಂದಾಯ ಮಾಡಿದ್ದಲ್ಲಿ ಇದನ್ನು ಆಯಾ ಕಾಲೇಜಿನಿಂದ ಭರಿಸಿಕೊಳ್ಳಲಾಗುವದು. ಶುಲ್ಕದ ವಿನಾಯಿತಿ ಪಡೆದವರ ವಿವರಗಳನ್ನೊಳಗೊಂಡ ಪಟ್ಟಿಯ ಒಂದು ಪ್ರತಿಯನ್ನು
ಹಣಕಾಸು ಅಧಿಕಾರಿ, ಗುಲಬರ್ಗಾ ವಿಶ್ವವಿದ್ಯಾಲಯಕಲಬುರಗಿ ಇವರಿಗೂ ಮತ್ತೊಂದು ಪ್ರತಿಯನ್ನು ಈ ವಿಭಾಗಕ್ಕೂ ಸಲ್ಲಿಸಬೇಕು. ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು
ಕಡ್ಡಾಯವಾಗಿ ಜಾತಿ ಪ್ರಮಾಣ ಪತ್ರವನ್ನು ಆಯಾ ತಹಶೀಲ್ದಾರರಿಂದ ಪಡೆದು ಅರ್ಜಿ ಜೊತೆ ಲಗತ್ತಿಸತಕ್ಕದ್ದು.

ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಲ್ಪಟ್ಟದ್ದಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆಯಾಗುವುದಿಲ್ಲ.
ಅಭ್ಯರ್ಥಿಗಳಿಂದ ಪಾವತಿಸಲಾದ ಅರ್ಜಿ ಪರಿಶೀಲನಾ ಶುಲ್ಕ ರೂ. 12ರಲ್ಲಿ 6ನ್ನು ಪ್ರತ್ಯೇಕ ಹುಂಡಿ ಮುಖಾಂತರ ವಿಶ್ವವಿದ್ಯಾಲಯದ ಸ್ಟೇಟ ಬ್ಯಾಂಕ ಆಫ್ ಇಂಡಿಯಾ
ಶಾಖೆಯಲ್ಲಿ ಪಾವತಿಯಾಗುವಂತೆ ಕುಲಸಚಿವರು (ಮೌಲ್ಯಮಾಪನ) ಇವರ ಹೆಸರಿನಲ್ಲಿ ಎಲ್ಲ ಪರೀಕ್ಷಾ ಅರ್ಜಿಪರಿಶೀಲನಾ ಶುಲ್ಕದ ಮೊತ್ತವನ್ನು ಒಂದೇ ಹಂತದಲ್ಲಿ
ಕಳುಹಿಸಬೇಕು. ರೂ. 750 ರ ದಂಡ ಶುಲ್ಕ ದಿನಾಂಕ ಮುಗಿದ ಮೇಲೆ ಕಳುಹಿಸಬೇಕು.

2017ನೇ ಸಾಲಿನಲ್ಲಿ ನಡೆಸಲಾದ ಪರೀಕ್ಷೆಗಳಲ್ಲಿ ಅನುತೀರ್ಣರಾಗಿದ್ದು ಇಲ್ಲವೇ ಪರೀಕ್ಷಾ ಫಲಿತಾಂಶ ಪ್ರಕಟವಾಗದಂತಹ ಅಭ್ಯರ್ಥಿಗಳನ್ನು ಅವರ ಪರೀಕ್ಷಾ ಫಲಿತಾಂಶ
ಪ್ರಕಟವಾದ 15 ದಿವಸಗಳೊಳಗಾಗಿ ಇಲ್ಲವೇ ವಿಶ್ವವಿದ್ಯಾಲಯ ನಿಗದಿಪಡಿಸಿದ ಪರೀಕ್ಷಾ ಪ್ರಾರಂಭ ದಿನಾಂಕಕ್ಕಿಂತ ಮೊದಲು ಇವರೆಡರಲ್ಲಿ ಯಾವುದು ಮೊದಲೋ ಅಂಥಹ
ಅರ್ಜಿಗಳನ್ನು ದಂಡ ಶುಲ್ಕವಿಲ್ಲದೆ ಮಾನ್ಯ ಮಾಡಲಾಗುವುದು.

ಅರ್ಜಿಗಳು ವಿಶ್ವವಿದ್ಯಾಲಯಕ್ಕೆ ಪ್ರಾಂಶುಪಾಲರ ಮುಖಾಂತರವೇ ಸಲ್ಲಿಸತಕ್ಕದ್ದು. ಅಭ್ಯರ್ಥಿಗಳು ನೇರವಾಗಿ ಸಲ್ಲಿಸಕೂಡದು. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು
ಕೇವಲ ಇಂಗ್ಲೀಷ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದೆ. ಉಳಿದ ಭಾಷೆಗಳಲ್ಲಿ ಬರೆಯತಕ್ಕದ್ದಲ್ಲ ಎಂಬುದನ್ನು ಪ್ರಾಂಶುಪಾಲರು ಅಭ್ಯರ್ಥಿಗಳ ಗಮನಕ್ಕೆ
ತರಬೇಕು. ವಿದ್ಯಾರ್ಥಿಗಳು ಇಂಗ್ಲೀಷ್ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಬರೆಯದೇ ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು
ಮೌಲ್ಯಮಾಪನವಾಗದೇ ಉಳಿಯುತ್ತವೆ. ಅಂಥಹ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಅನೂರ್ಜಿತಗೊಳಿಸಲಾಗುವುದೆಂದು ಅಭ್ಯರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು.
ಇದು ಭಾಷಾ ವಿಷಯಗಳಿಗೆ ಅನ್ವಯವಾಗುವುದಿಲ್ಲ.

ಪರೀಕ್ಷಾ ಶುಲ್ಕವನ್ನು ಒಮ್ಮೆ ಪಾವತಿ ಮಾಡಿದ ನಂತರ ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಇಲ್ಲವೆ ಮುಂಬರುವ
ಪರೀಕ್ಷೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ. ಅಪೂರ್ಣ ಹಾಗೂ ಪರಿಪೂರ್ಣವಿಲ್ಲದ ಅರ್ಜಿಗಳನ್ನು ವಿಶ್ವವಿದ್ಯಾಲಯ ಸ್ವೀಕೃತ ಮಾಡುವುದಿಲ್ಲ. ಅಲ್ಲದೇ ಇಂತಹ
ವಿಷಯಗಳಿಗೆ ಪತ್ರ ವ್ಯವಹಾರಕ್ಕೆ ಅಸ್ಪದವಿರುವುದಿಲ್ಲ.

Scheduled

ಪ್ರಾಂಶುಪಾಲರು ತಮ್ಮ ಕಚೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರದಾಗಿರಬೇಕೆಂದು ಮನವರಿಕೆ ಮಾಡಿಕೊಡುವಂತೆ ವಿನಂತಿಸಲಾಗಿದೆ.

NOTE: Online submission of Internal Assessment Marks by College from 03.10.2017 to 10.10.2017.

20.9.17

ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಗೆ,
ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೀದರ, ರಾಯಚೂರ ಮತ್ತು ಕಲಬುರಗಿ ಜಿಲ್ಲೆಗಳ ಎಲ್ಲ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ.
ಪ್ರತಿಗಳು:

1. ವಿತ್ತಾಧಿಕಾರಿಗಳು ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
2. ಸರಕಾರಿ ಲೆಕ್ಕ ಪರಿಶೋಧಕರು ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
3. ವಿಶ್ವವಿದ್ಯಾಲಯದ ಎಲ್ಲ ಉಪಕುಲಸಚಿವರುಗಳು: ಸಹಾಯಕ ಕುಲಸಚಿವರುಗಳು ಮತ್ತು ಪರೀಕ್ಷಾ ವಿಭಾಗದ ಎಲ್ಲ ಅಧೀಕ್ಷಕರು: ವಿಷಯ ನಿರ್ವಾಹಕರು.
4. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಸಚಿವರು, ಕುಲಸಚಿವರ(ಮೌಲ್ಯಮಾಪನ) ಅವರ ಆಪ್ತ ಸಹಾಯಕರು, ಗು. ವಿ. ಕಲಬುರಗಿ.
5. ಕುಲಪತಿಗಳ (ಮೌಲ್ಯಮಾಪನ) ಮೈಸೂರು, ಬೆಂಗಳೂರು,ಮಂಗಳೂರು, ಕರ್ನಾಟಕ, ಕುವೆಂಪು, ತುಮಕೂರ, ಬಿಜಾಪೂರ, ಹಂಪಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
6. ಕಾರ್ಯದರ್ಶಿಗಳು ಕರ್ನಾಟಕ ಲೋಕ ಸೇವಾ ಆಯೋಗ ಪಾರ್ಕ ಹೌಸ ಬೆಂಗಳೂರು.
7. ಅಧೀಕ್ಷಕರು ವಿದ್ಯಾರ್ಥಿಗಳ ಕುಂದುಕೊರತೆ ವಿಭಾಗ ಪರೀಕ್ಷಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
8. ಅಧೀಕ್ಷಕರು ಗ್ರಿವನ್ಸ್ ಸೆಲ್ ಹಣಕಾಸು ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
9. ಉಗ್ರಾಣ ಪಾಲಕರು, ಉಗ್ರಾಣ ಶಾಖೆ, ಪರೀಕ್ಷಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
10. ಕಂಪ್ಯೂಟರ ವಿಭಾಗ, ಪರೀಕ್ಷಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
11. Head, Computer Centre, Gulbarga University, Kalaburagi for kind information and notifying above schedule on University Website.